**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

Form No.4(Civil)
(R.P.No.57)

ಎಸ್ .ಸಿ. ನಂಃ **18/2017**

ಪಿ.ಡಬ್ಲ್ಯೂ ನಂಃ **02**

ಸಿ.ಡಬ್ಲ್ಯೂ ನಂಃ **03**

ಸಾಕ್ಷಿಯನ್ನು ದಿನಾಂಕಃ **21-05-2024**
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಶರಣಪ್ಪ |
| ತಂದೆಯ ಹೆಸರು | ಃ | ಪರಸಪ್ಪ |
| ವಯಸ್ಸು | ಃ | 38 ವರ್ಷ |
| ಉದ್ಯೋಗ | ಃ | ಹೊಲ ಮನಿ ಕೆಲಸ |
| ವಾಸ ಸ್ಥಳ | ಃ | ಗುಡ್ಡದ ದೇವಲಾಪುರ |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ಈಗ ನೋಡಿದ ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ 3 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯಿತು. ದಿಃ 9-8-2016 ರಂದು ಚಾಸಾ 1 ರವರ ಮನೆಯ ಮುಂದೆ ಸದರಿ ಸಹಿಯನ್ನು ಮಾಡಿದ್ದೆ. ಆ ಜಾಗದಲ್ಲಿ ನಿಪಿ 2 ಫೋಟೋ ತೆಗೆಯಲಾಯಿತು. ಕಟ್ಟಿಗೆ, ಪ್ಲೈವುಡ್ ತುಂಡುಗಳು ಮತ್ತು ಕೊಡಲಿ ಇವುಗಳನ್ನು ಪೊಲೀಸರು ತೆಗೆದುಕೊಂಡರು. ಅವುಗಳು ಈಗ ನನಗೆ ತೋರಿಸಿದ ಮುದ್ದೆಮಾಲು-1 ರಿಂದ 6 ಆಗಿರುತ್ತದೆ. ಅಲ್ಲಿ ಚಾಸಾ 1 ಇದ್ದರು.

ಪ್ರಶ್ನೆಃ ನೀವು ಓದಿ ಸಹಿ ಮಾಡಿದಿರೋ ಅಥವಾ ಪೊಲೀಸರು ಓದಿದರೋ?

ಉತ್ತರ ಃ ಪೊಲೀಸರು ಓದಿ ಹೇಳಿದರು.

2). ಪಂಚನಾಮೆಯನ್ನು ಸುಮಾರು 9-30 ಗಂಟೆಗೆ ಬರೆದರು. ಆ ಸಮಯ ನನ್ನ ಜೊತೆ ಚಾಸಾ 2 ಇದ್ದರು.

ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಬಿ ಕೆ ಡಿ ವಕೀಲರಿಂದ

3). ಪಂಚರಾಗಿ ಸಹಕರಿಸಲು ನನ್ನನ್ನು ಯಾರೂ ಕರೆದಿರಲಿಲ್ಲ. ನಾನು ಅಲ್ಲೇ ಇದ್ದೆ. ಚಾಸಾ 1 ರವರ ಕುಟುಂಬದವರ ಪರಿಚಯ ನನಗಿದೆ. ಚಾಸಾ 1 ರವರ ತಮ್ಮ ಚಾಸಾ 12 ಬಸವರಾಜ ಪೊಲೀಸ ಪೇದೆಯಾಗಿರುತ್ತಾರೆ ಎಂದರೆ ಸರಿ. ಅವರೇ ಈ ದಿನ ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿ. ಪಂಚನಾಮೆಯಲ್ಲಿ ಬರೆದ ಮಾಹಿತಿ ನನಗೆ ಗೊತ್ತಿದೆ. ಸ್ಥಳದ ಚೆಕ್ಕುಬಂದಿ ಪಂಚನಾಮೆಯಲ್ಲಿ ಬರೆದಿದೆಯೋ ಇಲ್ಲವೋ ಗೊತ್ತಿಲ್ಲ. ಪಂಚನಾಮೆಯನ್ನು ಯಾವ ಪೊಲೀಸರು ಬರೆದರು ಎಂದು ಗೊತ್ತಿಲ್ಲ. ನನ್ನನ್ನು ಹೊರತುಪಡಿಸಿ ಪಂಚನಾಮೆಗೆ ಬೇರೆ ಯಾರೆಲ್ಲಾ ಸಹಿ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ.

4). ಪೊಲೀಸರು ಅಮಾನತ್ತುಪಡಿಸಿಕೊಂಡ ಕಟ್ಟಿಗೆಗಳ ಅಳತೆ ನನಗೆ ಗೊತ್ತಿಲ್ಲ. ಮುದ್ದೆಮಾಲು- ಕೊಡಲಿ ಯ ಮೇಲೆ ಯಾವುದೇ ವಿಶೇಷ ಗುರುತುಗಳು ಇರುವುದಿಲ್ಲ. ನನ್ನ ಮುಂದೆ ಪೊಲೀಸರು ಯಾವುದೇ ಪಂಚನಾಮೆ ಮಾಡಿರಲಿಲ್ಲ, ಆದರೂ ಸಹಾ ಚಾಸಾ 12 ರವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ